C.C. No.- 239/2025
CW-02/ PW-01

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ

ಸಾಕ್ಷಿಯನ್ನು ದಿನಾಂಕ- **11.05.2026** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಶ್ರೀನಿವಾಸ |
| ತಂದೆ / ಗಂಡನ ಹೆಸರು- | ತಿಮ್ಮಣ್ಣ |
| ವಯಸ್ಸು- | 44 ವರ್ಷಗಳು |
| ಉದ್ಯೋಗ- | ಒಕ್ಕಲುತನ |
| ವಾಸಸ್ಥಳ- | ಶಾಲಿಗನೂರು |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ನನಗೆ ಚಾಸಾ-1, 4 ಮತ್ತು 5 ಗೊತ್ತಿಲ್ಲ. ಚಾಸಾ-3 ಗೊತ್ತು. 1ನೇ ಆರೋಪಿ ಗೊತ್ತು. 2ನೇ ಆರೋಪಿ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈಗ ಸುಮಾರು 2 ವರ್ಷಗಳ ಹಿಂದೆ ನಾನು ಗಂಗಾವತಿ ಪೊಲೀಸ ಠಾಣೆಗೆ ಹೋಗಿದ್ದಾಗ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿ ದಾಳಿ ಪಂಚನಾಮೆಯನ್ನು ತೋರಿಸಿದ್ದು, ಸಾಕ್ಷಿಯು ಅದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ದಾಳಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ಯಾವುದೇ ಪಂಚನಾಮೆ ಮಾಡಿ ಯಾವುದೇ ವಸ್ತು ಜಪ್ತು ಪಡಿಸಿಕೊಂಡಿಲ್ಲ. ಮು ಮಾ.ವನ್ನು ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ

2. ನಾವು ಮೇಲ್ಕಂಡ ಉಭಯ ಪಂಚರು ಇಂದು ದಿನಾಂಕ 09-10-2024 ರಂದು 07-05 ಪಿ ಎಂ ಗಂಟೆಯ ಸುಮಾರು ಬೆನ್ನೂರು ಗ್ರಾಮದ ಕನಕದಾಸ ಸರ್ಕಲ್ ಹತ್ತಿರ ನಮ್ಮ ವೈಯಕ್ತಿಕ ಕೆಲಸದ ನಿಮಿತ್ಯ ನಾವು ನಿಂತುಕೊಂಡಿದ್ದಾಗ ಕಾರಟಗಿ ಪೊಲೀಸ್ ಠಾಣೆಯ ಸಿಬ್ಬಂದಿಯವರಾದ ತಾರಾಸಿಂಗ್ ಹೆಚ್.ಸಿ-147 ರವರು ನಮ್ಮ ಹತ್ತಿರ ಬಂದು ಪಿ.ಎಸ್.ಐ ರವರು ಬರಲು ಹೇಳಿರುತ್ತಾರೆ ಅಂತಾ ತಿಳಿಸಿದ ಮೇರೆಗೆ ನಾವು 07-15 ಪಿ.ಎಂ ಕ್ಕೆ ಕಾರಟಗಿ ಪೊಲೀಸ್ ಠಾಣೆಗೆ ಬಂದು ಹಾಜರಾದೆವು ಅಲ್ಲಿ ಕಾರಟಗಿ ಪೊಲೀಸ್ ಠಾಣೆಯ ಕಾಮಣ್ಣ ಪಿ.ಎಸ್.ಐ ರವರು ಹಾಜರಿದ್ದು ಅವರು ನಮಗೆ ತಿಳಿಸಿದ್ದೇನೆಂದರೆ, "ಕಾರಟಗಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆನ್ನೂರ ಗ್ರಾಮದ ಯಮನೂರಪ್ಪ ಭೋವಿ ಇವರ ಹೋಟೆಲ್ ಮುಂದುಗಡೆ ಇರುವ ಸಾರ್ವಜನಿಕ ಸ್ಥಳದಲ್ಲಿ" ಮಟ್ಕಾ ಜೂಜಾಟ ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ನಾವು ದಾಳಿ ಮಾಡಲು ಹೋಗುತ್ತಿದ್ದು ನಮ್ಮೊಂದಿಗೆ ದಾಳಿ ಕಾಲಕ್ಕೆ ಪಂಚರಾಗಿ ಬಂದು ಪಂಚನಾಮೆ ಜರುಗಿಸಿ ಕೊಡಲು ಕೇಳಿದ ಪ್ರಕಾರ ನಾವು ಉಭಯರು ಪಂಚರಾಗಲು ಒಪ್ಪಿದೆವು. ನಂತರ ಪಿ.ಎಸ್.ಐ ರವರು ನಮ್ಮನ್ನು ಹಾಗೂ ತಮ್ಮ ಠಾಣೆಯ ಸಿಬ್ಬಂದಿಯವರಾದ ತಾರಾಸಿಂಗ್ ಹೆಚ್.ಸಿ-147 ಮತ್ತು ಸುರೇಶ ಹೆಚ್.ಸಿ-40 ರವರನ್ನು ತಮ್ಮ ತಮ್ಮ ಮೋಟರ್ ಸೈಕಲ್ ಗಳ

ಮೇಲೆ ಕರೆದುಕೊಂಡು ನಮ್ಮನ್ನು ನಮ್ಮ ಮೋಟರ್ ಸೈಕಲ್ ಗಳನ್ನು ತೆಗೆದುಕೊಂಡು ಬರುವಂತೆ ತಿಳಿಸಿ ಬೆನ್ನೂರ ಗ್ರಾಮದ ಊರ ಹೊರಗಿನಿಂದ 07-20 ಪಿ.ಎಂ ಗಂಟೆಗೆ ಹೊರಟು ಬೆನ್ನೂರ ಗ್ರಾಮದ ಮಡಿವಾಳಪ್ಪರವರ ಗೋಡಾನ್ ಹತ್ತಿರ 07-30 ಪಿ.ಎಂ ಗಂಟೆಗೆ ಹೋಗಿ ಗೋಡಾನ್ ಮರೆಯಲ್ಲಿ ನಮ್ಮ ಮೋಟರ್ ಸೈಕಲ್ ಗಳನ್ನು ನಿಲ್ಲಿಸಿ ಎಲ್ಲರೂ ಕೆಳಗೆ ಇಳಿದು ನಂತರ ಖಚಿತ ಮಾಹಿತಿಯಂತೆ 20 ಮೀಟರ್ ನಷ್ಟು ನಡೆದುಕೊಂಡು ಹೋಗಿ ಬೆನ್ನೂರ ಗ್ರಾಮದ ಯಮನೂರಪ್ಪ ಭೋವಿರವರ ಹೋಟೆಲ್ ಮರೆಯಲ್ಲಿ ನಿಂತು ನೋಡಲಾಗಿ ನಾವು ನಿಂತಿದ್ದ 15 ಮೀಟರ್ ನಷ್ಟು ಅಂತರದಲ್ಲಿ 07-35 ಪಿ.ಎಂ ಸುಮಾರಿಗೆ ಬೆನ್ನೂರ ಗ್ರಾಮದ ಯಮನೂರಪ್ಪ ಭೋವಿ ಇವರ ಹೋಟೆಲ್ ಮುಂದುಗಡೆ ಇರುವ ಸಾರ್ವಜನಿಕ ಸ್ಥಳದಲ್ಲಿ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬನು ರಸ್ತೆಯಲ್ಲಿ ಹೋಗಿ ಬರುವ ಸಾರ್ವಜನಿಕರಿಗೆ ಕೂಗಿ ಕರೆದು ಮಟ್ಕಾ ನಂಬರ್ ಬರೆಯಿಸುವವರು ಬರೆಯಿಸಿರಿ 1 ರೂಪಾಯಿಗೆ 80 ರೂಪಾಯಿ ಕೊಡುತ್ತೇನೆ ಇದು ನಸೀಬದ ಜೂಜಾಟ ಅನ್ನುತ್ತಾ ಜನರನ್ನು ಕೂಗಿ ಕರೆಯುತ್ತಿದ್ದನು, ಒಬ್ಬನು ಜನರಿಂದ ಹಣ ಪಡೆದುಕೊಂಡು ಓಸಿ ನಂಬರಿನ ಚೀಟಿ ಬರೆದು ಕೊಡುತ್ತಾ ಮಟ್ಕಾ ಜೂಜಾಟದಲ್ಲಿ ತೊಡಿಗಿದ್ದನ್ನು ಖಚಿತಪಡಿಸಿಕೊಂಡು ಪಿ.ಎಸ್.ಐ ಸಾಹೇಬರು ತಮ್ಮ ಸಿಬ್ಬಂದಿಯವರೊಂದಿಗೆ ನಮ್ಮ ಸಮಕ್ಷಮ ದಾಳಿ ಮಾಡಿದಾಗ ಮಟಕಾ ನಂಬರ್ ಬರೆಸಲು ಬಂದ ಸಾರ್ವಜನಿಕರು ಹಾಗೂ ಜನರಿಗೆ ಕೂಗಿ ಕರೆಯುತ್ತಿದ್ದ ವ್ಯಕ್ತಿಯು ಓಡಿಹೋಗಿದ್ದು, ಜನರಿಂದ ಮಟಕಾ ಚೀಟಿಯನ್ನು ಬರೆದುಕೊಟ್ಟು ಹಣವನ್ನು ಪಡೆದುಕೊಳ್ಳುತ್ತಿದ್ದ ವ್ಯಕ್ತಿ ಸಿಕ್ಕಿಬಿದ್ದಿದ್ದು, ಸಿಕ್ಕಿ ಬಿದ್ದ ವ್ಯಕ್ತಿಯನ್ನು ಪಿ.ಎಸ್.ಐ ರವರು ನಮ್ಮ ಸಮಕ್ಷಮ ವಿಚಾರಿಸಲು ತನ್ನ ಹೆಸರು ಈರಣ್ಯ

ತಂದೆ ಅಯ್ಯಣ್ಣ ದಿಢೀರ ವಯ: 48 ವರ್ಷ ಜಾ: ಕುರುಬರು ಉ: ಕೂಲಿಕೆಲಸ ಸಾ: ಹಳೆ ಶಾಲಿಗನೂರ ತಾ: ಕಾರಟಗಿ ಅಂತಾ ತಿಳಸಿದನು, ನಂತರ ಪಿ.ಎಸ್.ಐ ಸಾಹೇಬರು ನಮ್ಮ ಸಮಕ್ಷಮ ಆತನ ಅಂಗ ಜಪ್ತಿ ಮಾಡಲು ಅವನ ಹತ್ತಿರ ಒಂದು ಬಾಲ್ ಪೆನ್ನು ಒಂದು ಮಟ್ಕಾ ಪಟ್ಟಿ ಹಾಗೂ ಮಟಕಾ ಜೂಜಾಟದಿಂದ ಬಂದ ನಗದು ಹಣ ರೂ: 870/- ಗಳುರೂಪಾಯಿ ಸಿಕ್ಕಿದ್ದು ಇರುತ್ತವೆ. ಸದರಿ ನಗದು ಹಣ ಮಟಕಾ ಸಾಮಾಗ್ರಿಗಳನ್ನು ಪಿ.ಎಸ್.ಐ ಸಾಹೇಬರು ಒಂದು ಕವರಿನಲ್ಲಿ ಹಾಕಿ ಅದಕ್ಕೆ ನಮ್ಮ ಸಹಿ ಮಾಡಿಸಿ ಮತ್ತು ತಮ್ಮ ಸಹಿವುಳ್ಳ ಚೀಟಿಯನ್ನು ಅದಕ್ಕೆ ಅಂಟಿಸಿ ಕೇಸಿನ ಪುರಾವೆ ಕುರಿತು ತಮ್ಮ ತಾಬಾಕ್ಕೆ ತೆಗೆದುಕೊಂಡರು, ನಂತರ ಮಟಕಾ ಜೂಜಾಟದಲ್ಲಿ ಸಿಕ್ಕಿ ಬಿದ್ದ ವ್ಯಕ್ತಿಗೆ ಪಿ.ಎಸ್.ಐ ಸಾಹೇಬರು ಮಟ್ಕಾ ಪಟ್ಟಿಯನ್ನು ಯಾರಿಗೆ ಕೊಡುತ್ತೀಯಾ ಎಂದು ಕೇಳಲು ಮಟಕಾ ಪಟ್ಟಿಯನ್ನು ಬರೆದು ನನ್ನ ಜೊತೆ ಇದ್ದ ತಾವು ದಾಳಿ ಮಾಡಿದ ಕಾಲಕ್ಕೆ ಓಡಿ ಹೋದ ಕುಮಾರ ವಯ: 40 ವರ್ಷ ಜಾ: ಕೊರಚರು ಉ: ಕೂಲಿಕೆಲಸ ಸಾ: ರುದ್ರಪಾದ, ತೆಕ್ಕಲಕೋಟೆ ಈತನಿಗೆ ಕೊಡುತ್ತೇನೆ ಅಂತಾ ತಿಳಿಸಿದನು.ನಂತರ ಸದ್ರಿ ಆರೋಪಿತನನ್ನು ಪಿ.ಎಸ್.ಐ ರವರು ತಮ್ಮ ತಾಬಾಕ್ಕೆ ಪಡೆದುಕೊಂಡರು. ಸದರಿ ಮಟ್ಕಾ ದಾಳಿ ಪಂಚನಾಮೆಯನ್ನು ದಿನಾಂಕಃ 09-10-2024 ರಂದು 07-35 ಗಂಟೆಗೆ 08-35 ಗಂಟೆಯವರೆಗೆ ನಮ್ಮ ಸಮಕ್ಷಮ ಮಾಡಿದರು ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ದಾಳಿ ಮಾಡಿ ಪಂಚನಾಮೆ ಜರುಗಿಸಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

C.C. No.- 239/2025
CW-02/ PW-01

ಪಾಟೀಸವಾಲು-

ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು ಪಾಟೀಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.